# ಗ್ರಾಮೀಣ ಪ್ರಾಥಮಿಕ ಶಾಲೆಗಳ ಪರಿವರ್ತನೆ: ಸಮುದಾಯ ಕೇಂದ್ರಿತ ಮಾರ್ಗದ ಪರಿಸ್ಥಿತಿ

ಜಾವೇದ್ ಸಿದ್ದಿಕಿ



## ಗ್ರಾಮೀಣ ಶಾಲೆಗಳ ಸ್ಥಿತಿ

ಭಾರತವು ತನ್ನ ಸುಮಾರು ಶೇಕಡಾ 98 ರಷ್ಟು ವಸತಿ ಪ್ರದೇಶಗಳಲ್ಲಿ ಪ್ರತೀ ಒಂದು ಕಿಲೋಮೀಟರಿಗೆ ಒಂದರಂತೆ ಪ್ರಾಥಮಿಕ ಶಾಲೆಯನ್ನು (ತರಗತಿ 1–5) ಹೊಂದಿರುವಂಥ ಅಸಾಧಾರಣ ಸಾಧನೆಯುಳ್ಳ ದೇಶವಾಗಿದೆ. ಅಂತೆಯೇ ಮಕ್ಕಳ ದಾಖಲಾತಿಯೂ ಅಧಿಕೃತ ದಾಖಲೆಗಳಲ್ಲಿ ಶಾಲಾ ಸೌಲಭ್ಯದ ಭತ್ಯೆಗೆ ಸರಿಸಮನಾಗಿ ಶೇಕಡಾ 96ನ್ನೂ ಮೀರಿಸಿದೆ. ಆದರೆ ಗ್ರಾಮೀಣ ಮಕ್ಕಳನ್ನು ಶಾಲೆಗೆ ಕರೆತರುವ ಈ ಒಳ್ಳೆಯ ಪ್ರಗತಿಯು ಕಡಿಮೆ ಧಾರಣ ಶಕ್ತಿ ಹಾಗು ಅಸಮರ್ಪಕ ಕಲಿಯುವಿಕೆಯ ಮಟ್ಟಗಳ ಕಾರಣದಿಂದ ಗಣನೀಯವಾಗಿ ಕುಂಠಿತಗೊಂಡಿದ್ದು, ಆ ಮಕ್ಕಳುಭ ವಿಷ್ಯದ ಸತ್ಪ್ರಜೆಗಳಾಗಬಹುದಾದ, ತಂದೆ ತಾಯಿಗಳಾಗಬಹುದಾದ ಹಾಗೂ ಆರ್ಥಿಕ ವ್ಯವಸ್ಥೆಗೆ ಕೊಡುಗೆ ನೀಡಬಹುದಾದ ಅವಕಾಶಗಳನ್ನು ತಡೆಹಿಡಿಯುತ್ತಿದೆ. ASER[1] 2016 2016 ತೋರಿಸುವ ಪ್ರಕಾರ ಎಂಟನೇ ತರಗತಿಯ ಶೇಕಡಾ 27ರಷ್ಟು ಮಕ್ಕಳು ಎರಡನೇ ತರಗತಿಯ ಪಠ್ಯವನ್ನು ಓದಲಾರದೆ ಹೋದರು ಹಾಗೂ ಬಹುತೇಕ ಶೇಕಡಾ 57ರಷ್ಟು ಮಕ್ಕಳು 3 ಅಂಕಿಯ ಸಂಖ್ಯೆಯನ್ನು ಒಂದಂಕಿಯ ಸಂಖ್ಯೆಯಿಂದ ಭಾಗಿಸಲಾರದೆ ಹೋದರು. ಕನಿಷ್ಠ ಪಕ್ಷ 1ನೇ ತರಗತಿಯ ಹಂತದ ಪಠ್ಯವನ್ನು ಓದಬಲ್ಲ 3ನೇ ತರಗತಿಯ ಮಕ್ಕಳ ಪ್ರಮಾಣ ಕೇವಲ ಶೇಕಡ 42.5.

ಪೂರ್ವ–ಮಧ್ಯ ಭಾರತದ 17 ಜಿಲ್ಲೆಗಳ ಶಾಲೆಗಳ ಮೇಲೆ ಕೇಂದ್ರೀಕೃತವಾದ ಗ್ರಾಮೀಣ ಭಾರತ ಪರಿವರ್ತನೆ (Transforming Rural India (TRI)) ಯ ಮೂಲ ಆಧಾರದ ಶೋಧನೆಗಳಂತೂ ಇನ್ನೂ ಶೋಚನೀಯ ಫಲಿತಾಂಶಗಳನ್ನು ತೋರಿಸಿತು. ಮೇಲಾಗಿ, ಈ ಅಧ್ಯಯನವು ಬೆಳಗ್ಗಿನಿಂದ ಸಂಜೆಯವರೆಗೆ ಪೂರ್ಣ ಅವಧಿಯಲ್ಲಿ ತೆರೆದಿರಬೇಕಾದ ಶಾಲೆಗಳು ಪೂರ್ಣ ಅವಧಿಯವರೆಗೆ ತೆರದಿರುವುದು ಅಪರೂಪವೆಂದೂ, ಅದರಲ್ಲಿ ಸರಿಸುಮಾರು ಶೇಕಡಾ 25 ರಷ್ಟು ಅರ್ಹತೆಯುಳ್ಳ ಶಿಕ್ಷಕರು ಇದ್ದರೆ, ಇನ್ನು ಶೇಕಡಾ 25 ರಷ್ಟು ತರಬೇತಿಯಿಲ್ಲದ 'ಅತಿಥಿ' ಶಿಕ್ಷಕರುಗಳೇ ಇದ್ದು, ಬಾಕಿ ಶೇಕಡಾ ಐವತ್ತರಷ್ಟು ಕೆಲಸ ಖಾಲಿ ಬಿದ್ದಿವೆ ಎಂಬುದನ್ನೂ ಕಂಡುಹಿಡಿಯಿತು. ಪೋಷಕರು ಮಕ್ಕಳನ್ನು ಸರ್ಕಾರಿ ಶಾಲೆಗಳಿಂದ ಬಿಡಿಸುತ್ತಿರುವುದು ಆಶ್ಚರ್ಯದ ಸಂಗತಿಯೇನಲ್ಲ: ಇವು ನಿಜವಾಗಿಯೂ ಶೋಚನೀಯ ಅಂಕಿ–ಅಂಶಗಳು. ನಮ್ಮ ಶಾಲೆಗಳು ಮಕ್ಕಳನ್ನು ಮೂಲಭೂತ ಕೌಶಲಗಳಿಂದ ಸನ್ನದ್ಧಗೊಳಿಸಲೂ ಸೋಲುತ್ತಿವೆ ಹಾಗೂ ತಲೆಮಾರುಗಳ ನಡುವಿನ ಚಲನಶೀಲತೆಯನ್ನು ಸ್ಥಗಿತಗೊಳಿಸುತ್ತಿವೆ. ಗ್ರಾಮೀಣ ಶಾಲೆಗಳಲ್ಲಿ ಹೆಚ್ಚಿನ ಸಂಖ್ಯೆಯ ಮಕ್ಕಳು ಮೊದಲ ಬಾರಿಗೆ ಕಲಿಯುವವವರೇ ಆಗಿರುತ್ತಾರೆ ಹಾಗೂ ಅರ್ಧದಷ್ಟು ಮಕ್ಕಳ ತಂದೆ ತಾಯಿಗಳು ಶಾಲೆಯ ಮೆಟ್ಟಿಲನ್ನು ಹತ್ತದೆ ಇರುವ ಕಾರಣ ಶಾಲೆಯ ಶಿಕ್ಷಣದ ಮೇಲೆ ಅವರಿಗಿರುವ ಅಪೇಕ್ಷೆ ತಮ್ಮ ಕುಟುಂಬದ ಪ್ರಗತಿಯ ಮುಂದುವರಿಕೆಯಷ್ಟೇ ಆಗಿರುತ್ತದೆ. ಹಾಗಾಗಿ ಗ್ರಾಮೀಣ ಶಾಲೆಗಳ ಈ ವ್ಯವಸ್ಥಿತ ಉದಾಸೀನದ ಸಾಮಾಜಿಕ ಬೆಲೆಯನ್ನು ಕುಟುಂಬಗಳು ಮತ್ತು ಸಮುದಾಯಗಳು ತೆರಬೇಕಾಗಿಬರುತ್ತದೆ.

ಕಲಿಯುವಿಕೆಗೆ ಸಂಬಂಧಪಟ್ಟ ಫಲಿತಾಂಶಗಳನ್ನು ಮೀರಿ ಶಾಲೆಗಳೊಡನೆ ತೊಡಗಿಸಿಕೊಳ್ಳುವುದು ನಮ್ಮ ಪ್ರಾಥಮಿಕ ಜವಾಬ್ದಾರಿಯಾಗುತ್ತದೆ, ಅದು ಪ್ರಜಾಪ್ರಭುತ್ವದ ಸಮಾಜವೊಂದರಲ್ಲಿ ನಮ್ಮ ಮಗುವಿನ ಭವಿಷ್ಯವನ್ನು ರೂಪಿಸುತ್ತದೆ. ಜಾತಿ, ವರ್ಗ, ಲಿಂಗ ತಾರತಮ್ಯಗಳು ಮತ್ತು ಶ್ರೇಣಿಗಳು ವ್ಯಾಪಕವಾಗಿರುವಂಥ ಆಳವಾಗಿ ಶ್ರೇಣೀಕೃತಗೊಂಡ ಸಮಾಜವೊಂದರಲ್ಲಿ ಸಮರ್ಥವಾಗಿ ಕಾರ್ಯ ನಿರ್ವಹಿಸುವ 'ಶಾಲೆಗಳು', ನಮ್ಮ ಸಾಂವಿಧಾನಿಕ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ, ನ್ಯಾಯ ಮತ್ತು ಉದಾರತೆಗಳ ಮೇಲೆ ಆಧಾರಿತವಾದ ನೂತನ ಸಾಮಾಜಿಕ ಕರಾರುಗಳನ್ನು ಬೆಸೆಯುವ ಪ್ರಾಥಮಿಕ ವಲಯಗಳಾಗಿವೆ. ಶಾಲೆಯಲ್ಲಿ ಮಗುವಿಗೆ ತನ್ನ ಕುಟುಂಬ ಮತ್ತು ಸಂಬಂಧಿಕರನ್ನು ಮೀರಿದ ಗೆಳೆತನಗಳನ್ನು ಬೆಳೆಸಿಕೊಳ್ಳುವ ಅವಕಾಶವಿರುತ್ತದೆ. ಇಂಥ ಗೆಳೆತನಗಳು ಆ ಮಗುವಿಗೆ ತನ್ನ ಆಂತರಿಕ ಸಾಮರ್ಥ್ಯವನ್ನು ನಿರ್ಭಿಡೆಯಿಂದ ಅಭಿವ್ಯಕ್ತಿಸಲು ಬೇಕಾದ ಸೂಕ್ತ ವಾತಾವರಣವನ್ನು ಒದಗಿಸಿ ಕೊಡುತ್ತವೆ.

## ಗ್ರಾಮೀಣ ಭಾರತದ ಪರಿವರ್ತನೆಯ ಪ್ರಯತ್ನಗಳು

ಶೈಕ್ಷಣಿಕ ಫಲಿತಾಂಶಗಳಿಗೆ ಬದುಕಿನ ಇತರ ಉತ್ಕೃಷ್ಟ ಆಯಾಮಗಳೊಂದಿಗೆ ವಿಭಾಜಕ ಹಾಗೂ ಪರಸ್ಪರ ಬಲಪಡಿಸುವ ತಡೆ ಹಲ್ಲುಗಳಿವೆ [(ratchet) ಹಿಂದಕ್ಕೆ ಹೋಗದಂತೆ ತಡೆದು, ಮುಂದಕ್ಕೆ ಹೋಗುವಂತೆ ಚಾಲನ ಮಾಡಲಾಗುವ]. ಪ್ರಾಥಮಿಕ ಶಾಲೆಗಳಲ್ಲಿ ಕಂಡುಬರುವ 'ಪ್ರಾರಂಭದ ಹಂತದ ಕಲಿಯುವಿಕೆಯ ಸಂಕಷ್ಟಗಳಿಗೂ' ಕಡಿಮೆ ಗುಣಮಟ್ಟದ ಅಥವಾ ಶಾಲಾಪೂರ್ವ ಶಿಕ್ಷಣದ ಅಭಾವಕ್ಕೂ ಸಂಬಂಧವಿದ್ದು, ಇದು ವಿಶೇಷತಃ ಅಕ್ಷರ–ಅಭಾವವುಳ್ಳ ಗ್ರಾಮೀಣ ಹಿನ್ನೆಲೆಯ ಕುಟುಂಬಗಳಿಂದ ಬರುವ ತಮ್ಮ ತಲೆಮಾರಿನ ಮೊಟ್ಟಮೊದಲ ವಿದ್ಯಾರ್ಥಿಗಳ ವಿಷಯದಲ್ಲಿ ಸತ್ಯವೆನಿಸುತ್ತದೆ. ಒಂದು ಮಗುವಿನ ಮಾನಸಿಕ–ಸಾಮಾಜಿಕ ಹಾಗೂ ಜ್ಞಾನಾತ್ಮಕ ಬೆಳವಣಿಗೆಗೂ, ಮಗುವಿನ ವಾಸ್ತವ್ಯ, ರೋಗಬಾಧೆಯ ಹೊರೆ, ನೈರ್ಮಲ್ಯ, ಮನೆಯಲ್ಲಿನ ಆಹಾರದ ಲಭ್ಯತೆ, ಮನೆಯ ಆಂತರಿಕ ಲಿಂಗ ತಾರತಮ್ಯ ಮತ್ತು ಇತರ ನಿರ್ಣಾಯಕ ಅಂಶಗಳೊಂದಿಗೆ ತಳುಕು ಹಾಕಿಕೊಂಡಂತಹ, ಆ ಮಗುವಿಗೆ ಮೊದಲ 1000 ದಿನಗಳಲ್ಲಿ ದೊರೆಯುವ ಪೋಷಕಾಂಶಗಳ ಪೂರೈಕೆಗೂ ನೇರಾ ನೇರ ಸಂಬಂಧ ಇರುವುದನ್ನು ಸಂಶೋಧನೆಗಳು

1 ಶಿಕ್ಷಣದ ವಾರ್ಷಿಕ ಸಮೀಕ್ಷೆ [Annual Status of Education (ASER)), 2005 ರಿಂದ ಪ್ರಥಮ್ ಎಂಬ ಸರ್ಕಾರೇತರ ಸಂಸ್ಥೆಯು ಕೈಗೊಳ್ಳುತ್ತಿರುವ ಭಾರತದ ಅತಿದೊಡ್ಡ ಸಮೀಕ್ಷೆ.

| ಮಾರ್ಗಗಳು | ವಿವರಣೆ | ಯಶಸ್ಸು ಹೇಗೆ ಕಾಣುತ್ತದೆ? |
|---|---|---|
| ತಾಯಿ ತಂದೆ ಮತ್ತು ಮಗುವಿನ ನಡುವಿನ ಪರಸ್ಪರ ಸಂವಹನದ ವರ್ಧನೆ | ಇದು ಮಗುವಿಗೆ ತಂದೆ ತಾಯಿಗಳಿಂದ ಸಿಗಬಹುದಾದ ಬೆಂಬಲದ ಮೇಲೆ ಕೇಂದ್ರೀಕೃತವಾಗಿದೆ, ಇದು ಒಳಗೊಳ್ಳುವ ಅಂಶಗಳೇನೆಂದರೆ,<br>– ತಂದೆ ತಾಯಿಗಳಲ್ಲಿ ಶಿಕ್ಷಣದ ಉದ್ದೇಶ ಮತ್ತು ಅರಿವನ್ನು ಬೆಳೆಸುವುದು.<br>– ಬಾಲ್ಯದ ಪರ್ಯಾಯ ಕಲ್ಪನೆಗಳೆಡೆಗೆ ಹಾಗೂ ಮನೆಯ-ಕಡೆಯಿಂದ ಕೊಡಬೇಕಾದ ಬೆಂಬಲದ ಬಗ್ಗೆ ತಂದೆ ತಾಯಿಗಳನ್ನು ಸಂವೇದನಾಶೀಲರನ್ನಾಗಿಸುವುದು.<br>– ಮನೆಗಳಲ್ಲಿ ಕಲಿಕಾ-ಸಾಮಗ್ರಿಗಳ ಲಭ್ಯತೆ ಹಾಗೂ ಅಕ್ಷರ –ಸಮೃದ್ಧ ವಾತಾವರಣ ಕಲ್ಪಿಸುವುದು.<br>– ತಂದೆ, ತಾಯಿ–ಮಗುವಿನ ಜಂಟಿ ಕಾರ್ಯ ಹಾಗೂ ಪ್ರಸ್ತುತಿಗಳು ತಂದೆ ತಾಯಿಗಳು ಮಗುವಿನ ಕಲಿಕೆಯಲ್ಲಿ ಸಮಯ ವಿನಿಯೋಗಿಸುವಂಥವರಾಗಿ, ಆಸಕ್ತಿಯುಳ್ಳವರಾಗಿ ಹಾಗೂ ಬೆಂಬಲ ಕೊಡುವಂಥವರಾಗುವುದು. | ತಂದೆ ತಾಯಿಗಳು ಮಗುವಿನ ಕಲಿಕೆಯಲ್ಲಿ ಸಮಯ ವಿನಿಯೋಗಿಸುವಂಥವರಾಗಿ, ಆಸಕ್ತಿಯುಳ್ಳವರಾಗಿ ಹಾಗೂ ಬೆಂಬಲ ಕೊಡುವಂಥವರಾಗುವುದು. |
| ತಂದೆ ತಾಯಿಗಳು – ಶಾಲೆಯ ಜೊತೆ ತೊಡಗಿಸಿಕೊಳ್ಳುವಿಕೆಯ ಉತ್ತೇಜನ | ತಂದೆ ತಾಯಿಗಳು– ಶಾಲೆಯ ಜೊತೆ ತೊಡಗಿಸಿಕೊಳ್ಳುವಿಕೆಯ ಉತ್ತೇಜನ ಇದು ಶಾಲೆ ಮತ್ತು ಶಿಕ್ಷಕರೊಡನೆ ತಂದೆ ತಾಯಿಗಳು ತೊಡಗಿಸಿಕೊಳ್ಳುವುದರ ಮೇಲೆ ಕೇಂದ್ರೀಕೃತವಾಗಿದೆ., ಇದು ಒಳಗೊಳ್ಳುವ ಅಂಶಗಳೇನೆಂದರೆ,<br>– ತನ್ನ ಮಗುವಿನ ಬಗ್ಗೆ ಶಿಕ್ಷಕರೊಡನೆ ಮಾತುಕತೆ ನಡೆಸಲು ಪೋಷಕರ ಸಭೆಗಳ ಹಾಗೂ ಅಂತಹುದೇ ಇತರ ರಚನೆಗಳ ಮೂಲಕ ಸಾಧ್ಯವಿರುವೆಡೆಗಳಲ್ಲಿ ಪೋಷಕರಿಗೆ ಬೆಂಬಲ ನೀಡುವುದು<br>– ತನ್ನ ಮಗುವಿನ ಮತ್ತು ಮಗುವಿನ ಸಹಪಾಠಿಗಳ ಕಲಿಕೆಯ ಪ್ರಾಪ್ತಿಯನ್ನುಅಳೆಯಲು ತಂದೆ ತಾಯಿಗಳನ್ನು ತಯಾರುಮಾಡುವುದು<br>– ಶಿಕ್ಷಕರು ಮತ್ತು ಮಕ್ಕಳ ನಡುವಿನ ಮಾತುಕತೆ ಹಾಗೂ ಶಾಲಾ ಚಟುವಟಿಕೆಗಳನ್ನು ಬೆಂಬಲಿಸಲು ಪೋಷಕರ ಗುಂಪನ್ನು ರಚಿಸುವುದು | ತನ್ನ ಮಗು ಹೇಗೆ ಓದುತ್ತಿದ್ದಾಳೆ/ನೆ ಎಂಬುದನ್ನು ತಿಳಿಯಲು ಪೋಷಕರಿಗೆ ಔಚಿತ್ಯ ಹಾಗೂ ಒಮ್ಮತ ಎರಡೂ ಸಿಗುವಂತಾಗುತ್ತದೆ, ಅವರು ಶಾಲೆಯ ವಿಧಿಬದ್ಧ ಕೆಲಸ ಕಾರ್ಯಗಳನ್ನು ಬೆಂಬಲಿಸಿ ಸಹಕರಿಸುವ ಮನಸ್ಥಿತಿ ಉಳ್ಳವರಾಗುತ್ತಾರೆ. |
| (ಅ) ಶಾಲೆಯೊಡನೆ ಸ್ಥಳೀಯ ಸಮುದಾಯಗಳ ತೊಡಗಿಸಿಕೊಳ್ಳುವಿಕೆಯನ್ನು ಉತ್ತೇಜಿಸುವುದು<br>(ಆ) ಶಿಕ್ಷಣವನ್ನು ಬೆಂಬಲಿಸುವಂತಹ ಸ್ಥಳೀಯ ಪರಿಸರವನ್ನು ನಿರ್ಮಿಸಿ ಅದನ್ನು ಮುಂದುವರೆಸಿಕೊಂಡು ಹೋಗುವುದು | ಇದು ಪೋಷಕರನ್ನು ಮೀರಿ ಇತರ ಹಳ್ಳಿಗರು, ಸ್ತ್ರೀ ಸಂಘಗಳು, ಸಾಂಪ್ರದಾಯಿಕ ಸಂಘಗಳು, ಪಂಚಾಯತ್ ಮುಖ್ಯಸ್ಥರು ಇಂತಹವರನ್ನೊಳಗೊಂಡ 'ಸಮುದಾಯ'ದ ಮೇಲೆ ಕೇಂದ್ರೀಕೃತಗೊಂಡಿದೆ ಹಾಗೂ ಇದರಲ್ಲಿ ಬರುವ ಕಾರ್ಯಗಳು ಕೆಳಕಂಡಂತಿರಬಹುದು<br>– ಸ್ಥಳೀಯ ಶಾಲೆಯ ಬಗ್ಗೆ ಒಡೆತನದ, ತೊಡಗಿಸಿಕೊಳ್ಳುವಿಕೆಯ, ಬೆಂಬಲದ ಮತ್ತು ಹೆಮ್ಮೆಯ ಭಾವನೆಗಳನ್ನು ಪೋಷಿಸುವುದು<br>– ಆರ್ ಟಿ ಇ ಯ ಪ್ರಕಾರ ಅಧಿಕೃತಗೊಂಡ ಮೂಲಭೂತ, ವ್ಯವಸ್ಥೆಗಳು, ಶಿಕ್ಷಕರು ಮತ್ತು ಸರ್ಕಾರದಿಂದ ಸಿಗುವ ಸಹಕಾರಗಳ ಬಗ್ಗೆ ನಾಗರೀಕ ತಿಳುವಳಿಕೆಯನ್ನು ಹೊಂದುವುದು<br>– ಎಸ್‌ಎಂಸಿಯನ್ನು ಬಲಪಡಿಸುವುದು – ಅದರ ಸದಸ್ಯರುಗಳು ತಮ್ಮ ಪಾತ್ರಗಳ ಬಗ್ಗೆ ಸೂಕ್ತ ತಿಳುವಳಿಕೆಯನ್ನು ಹೊಂದುವುದು<br>– ಗ್ರಾಮೀಣ ಶಿಕ್ಷಣ ಸಮಿತಿಗಳು, ಜಾನಪದ ಶಿಕ್ಷಾ ಉಪಸಮಿತಿ ಮತ್ತಿತರ ಸಮಿತಿಗಳು ಕಾರ್ಯಹಿಸುವುದು<br>– ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಮಾಜಿಕ ಜೊತೆಗಾರರಿಂದ ಒತ್ತಡವನ್ನುಂಟುಮಾಡುವುದು<br>– ಅರ್ಧಕ್ಕೆ ಶಾಲೆ ಬಿಟ್ಟ ಮಕ್ಕಳೊಂದಿಗೆ ಸಮುದಾಯದ ತೊಡಗಿಸಿಕೊಳ್ಳುವಿಕೆ<br>– ಮಕ್ಕಳು ಸಂಜೆಯ ವೇಳೆಯ ಕೆಲ ತಾಸುಗಳನ್ನು ಓದಲಿಕ್ಕೆಂದು ಮೀಸಲಿಡುವುದನ್ನು ರೂಢಿಗತ ಸಂಗಾತಿಯನ್ನಾಗಿ ಮಾಡುವುದು<br>– ಸಮುದಾಯ ಸ್ವಯಂಸೇವಕರು – ಶಿಕ್ಷಣ ಮಿತ್ರ / ತರಗತಿಯ ಹೊರಗೆ ಮಕ್ಕಳಿಗೆ ಅರೆ–ಶಿಕ್ಷರ ಬೆಂಬಲ ಒದಗಿಸುವುದು<br>– ಶಿಕ್ಷಣ ಪ್ರೋತ್ಸಾಹ ಕೇಂದ್ರಗಳು, ಗ್ರಂಥಾಲಯ ಹಾಗು ಮಕ್ಕಳ ಚಟುವಟಿಕಾ ಕೇಂದ್ರಗಳನ್ನು ಪ್ರೋತ್ಸಾಹಿಸುವುದು | ಸ್ಥಳೀಯ ಸಮುದಾಯವು ಶಾಲೆಯ ಒಡೆತನವನ್ನು ವಹಿಸಿಕೊಂಡು, ಆಸಕ್ತಿವಹಿಸಿ ತೋರಿಸಿ, ತೊಡಗಿಸಿಕೊಂಡು ಶಾಲೆಯು ಸರಿಯಾಗಿ ಕಾರ್ಯ–ನಿರ್ವಹಿಸುವುದರಲ್ಲಿ ಸಹಕಾರ ನೀಡುತ್ತದೆ. ಶಿಕ್ಷಣವನ್ನು ಬೆಂಬಲಿಸುವಂತಹ (ಸ್ವಯಂ ಸೇವೆಯ, ಆರ್ಥಿಕ ಸಂಪನ್ಮೂಲದ ಮೂಲಕ) ಕ್ರಿಯಾ ವಿಧಾನಗಳಿಗೆ ಕೊಡುಗೆ ನೀಡುತ್ತದೆ |

| | | |
|---|---|---|
| ಶಿಕ್ಷಕರ ಪ್ರೇರಣೆ ಮತ್ತು ಸಾಮರ್ಥ್ಯವನ್ನು ವೃದ್ಧಿಸುವುದು | ಇಲ್ಲಿ ಶಿಕ್ಷಣದ ಧ್ಯೇಯಗಳೊಡನೆ ಶಿಕ್ಷಕರಿಗಿರುವ ಸಂಬಂಧದ ಮೇಲೆ ಗಮನವನ್ನು ಕೇಂದ್ರೀಕರಿಸಲಾಗಿದೆ, ಇದರಲ್ಲಿ ಬರುವ ಅಂಶಗಳೆಂದರೆ:<br>– ಮಾನ್ಯತೆಯ ಔಪಚಾರಿಕ ಕಾರ್ಯವಿನ್ಯಾಸಗಳು<br>– ಮಾತುಕತೆಗಳು ಮತ್ತು ಸಮಾನಸ್ಕಂಧರ ಗುಂಪುಗಳು<br>– ಶಿಕ್ಷಕರ ಸಂಪನ್ಮೂಲ ಕೇಂದ್ರ<br>– ಉತ್ತಮ ತರಗತಿ ಸಾಮಗ್ರಿಗಳು ಹಾಗೂ ವಿಧಾನಗಳು<br>– ಕಾರ್ಯಾಭ್ಯಾಸ ಹಾಳೆಗಳು, ಕಲಿಸುವ-ಕಲಿಯುವ ಸಾಮಗ್ರಿಗಳು | ಶಿಕ್ಷಕರು ಪ್ರೇರಿತರಾಗಿ ತರಗತಿಗಳನ್ನು ಉತ್ತಮಗೊಳಿಸಲು, ಅರ್ಥಪೂರ್ಣಗೊಳಿಸಲು, ಆಕರ್ಷಕವಾಗಿಸಲು ಹಾಗೂ ಕಲಿಯುವಿಕೆ ಮತ್ತು ಆ ಪ್ರಕ್ರಿಯೆಯನ್ನು ಆನಂದಿಸುವುದನ್ನು ವ್ಯಾಪಕಗೊಳಿಸಲು ಸಶಕ್ತರಾಗುತ್ತಾರೆ |
| ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವುದು | ಸಮುದಾಯ ಮತ್ತು ವಿಭಾಗಗಳ ಮಟ್ಟಗಳಲ್ಲಿ ಮೇಲ್ವಿಚಾರಣೆ ಮತ್ತು ಬೆಂಬಲ ವ್ಯವಸ್ಥೆಯನ್ನು ಬಲಪಡಿಸುವುದು;<br>– ಹೊಸ ವಿಧಾನಗಳ ಪರಿಚಯವನ್ನು ಊರ್ಜಿತಗೊಳಿಸಬಲ್ಲ ಪ್ರಕ್ರಿಯೆಯನ್ನಾಗಿ ಮಾಡಲು ಸಿ ಆರ್ ಸಿ ಮತ್ತು ಬಿ ಆರ್ ಸಿ ಸಭೆಗಳಲ್ಲಿ ಭಾಗವಹಿಸುವುದು<br>– ಸಿ ಆರ್ ಸಿ ಮತ್ತು ಬಿ ಆರ್ ಸಿ ಸಭೆಗಳಲ್ಲಿ ಭಾಗವಹಿಸುವ ಮೂಲಕ ಈ ಕಾರ್ಯಕ್ರಮದ ವ್ಯಾಪ್ತಿಯನ್ನು ಹೆಚ್ಚಿಸಲು ಬಿಈಓ ಜೊತೆಗೆ ಕಾರ್ಯನಿರ್ವಹಿಸುವುದು.<br>– ಈ ಅಂಶಗಳ ಬಗ್ಗೆ ಆಡಳಿತ ವರ್ಗಗಳು ಮತ್ತು ಆಡಳಿತಾತ್ಮಕ ರಚನೆಗಳನ್ನು ಸಂವೇದನಾಶೀಲಗೊಳಿಸುವುದು ಹಾಗೂ ಅವುಗಳನ್ನು ಸಾಂಸ್ಥೀಕರಿಸುವತ್ತ ಹೆಜ್ಜೆಯಿಡುವುದು | ಶೈಕ್ಷಣಿಕ ಅಧಿಕಾರಿ ವರ್ಗ ಮತ್ತು ಸ್ಥಳೀಯ ಕಾರ್ಯವಿಧಾನಗಳು ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರಿಗೆ ಪ್ರೋತ್ಸಾಹಕವಾಗಿರುತ್ತವೆ. |

ಬಲಪಡಿಸಿವೆ. ಶಾಲೆಗಳ ಮೂಲಭೂತ ಫಲಿತಾಂಶಗಳ ಕಾರ್ಯಸಿದ್ಧಿಗೆ ಸಮರ್ಪಕವಾಗಿ ಕಾರ್ಯನಿರ್ವಹಿಸುವ ಶಾಲೆಗಳ ಜೊತೆಗೆ ಸಮರ್ಪಕವಾಗಿ ಕಾರ್ಯನಿರ್ವಹಿಸುವ ಗ್ರಾಮೀಣ ಜೀವನವೂ ಅತ್ಯಗತ್ಯವಾಗಿದೆ.

ಟಿ.ಆರ್.ಐ.ನ ಶೈಕ್ಷಣಿಕ ಪ್ರಯತ್ನವು ಗ್ರಾಮಗಳಲ್ಲಿನ ಸಮುದಾಯಗಳ ನಾಯಕತ್ವದ ಜೊತೆಗೆ ಆಗುವ ಬಹು-ಆಯಾಮಗಳ ಬದಲಾವಣೆಗಳ ಸುತ್ತ ಕೇಂದ್ರೀಕೃತವಾದ ಸ್ಥೂಲರೂಪದ ಕಾರ್ಯಾಚರಣೆಗಳು, ಸ್ಥಾಪಿತವಾಗಿದೆ. ನಾವು ಅರ್ಥಮಾಡಿಕೊಂಡ ಪ್ರಕಾರ ನಮ್ಮ ಶಾಲೆಗಳ ಶೋಚನೀಯ ಸ್ಥಿತಿಗೆ ಕಾರಣವಾದ ಪ್ರಧಾನ ಚಾಲಕಶಕ್ತಿಯು ಮೂರು-ರೀತಿಯ ವಿಶ್ವಾಸದ ಕೊರತೆಯೇ ಆಗಿದೆ: ಆ ಮೂರು ವಿಧಗಳೆಂದರೆ, ಸಮುದಾಯ-ಶಾಲೆ, ಶಾಲೆ-ಶಿಕ್ಷಕ ಹಾಗೂ ವಿದ್ಯಾರ್ಥಿ ಸಮುದಾಯದ ನಡುವಿನ ತಪ್ಪಿ ಹೋದ ಸಂಬಂಧ. ಟಿ.ಆರ್.ಐ.ನ ತೊಡಗಿಸುವಿಕೆಯು ಬಹುಮುಖ ಧೋರಣೆಯ ಮೂಲಕ ಈ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಸೂಕ್ತ ವಾತಾವರಣವನ್ನು ಕಲ್ಪಿಸುವ ಪ್ರಯತ್ನಮಾಡುತ್ತದೆ. ಶಾಲೆ ಮತ್ತು ಶಿಕ್ಷಕರ ಹೊಣೆಗಾರಿಕೆಯನ್ನು ಹೆಚ್ಚಿಸುವ ಹಾಗೂ ಉತ್ತಮ ತರಗತಿ ಅನುಭವಕ್ಕಾಗಿ ಆವಿಷ್ಕರಿಸಿದ ಬೋಧನಾ ವಿಧಾನಗಳನ್ನು ತರುವ ಜೊತೆಯಲ್ಲೇ ತಂದೆ ತಾಯಿಗಳ ಅಪೇಕ್ಷೆಗಳನ್ನು ಮತ್ತು ಗುರಿ ಹಾಗೂ ತೊಡಗಿಸುವಿಕೆಯನ್ನು ರೂಪಿಸುವಲ್ಲಿ ಸಮುದಾಯದ ಹೊಣೆಗಾರಿಕೆಯನ್ನು ಧನಾತ್ಮಕವಾದ ಚಾಲಕ ಶಕ್ತಿಯನ್ನಾಗಿ ಉಪಯೋಗಿಸಿಕೊಳ್ಳುವ ಪ್ರಯತ್ನಗಳೂ ನಡೆದಿವೆ. ಟಿ ಆರ್ ಐ ನ ಶಿಕ್ಷಣ ವಿಭಾಗದ ಸಮಿತಿಯು ಅಪೇಕ್ಷಿತ ಬದಲಾವಣೆಗಳನ್ನು ತರಲು ಕೆಳಕಂಡಂತಹ ಮಾರ್ಗಗಳನ್ನು ವಿವರವಾಗಿ ಪಟ್ಟಿಮಾಡಿದೆ.

**ಸಮುದಾಯ ಕ್ರಿಯಾಶೀಲತೆಗೆ ಸೂಕ್ತ ಅವಕಾಶಗಳನ್ನು ಕಲ್ಪಿಸುವುದು.**

ನಮ್ಮ ಹಿಂದಿನ ಪ್ರಯತ್ನಗಳಿಂದ ಕಲಿಯುತ್ತ, ಸಮುದಾಯವನ್ನು ಒಳಗೊಳ್ಳುವುದನ್ನು ನಮ್ಮ ಪ್ರಯತ್ನಗಳ ಕೇಂದ್ರವಾಗಿಸಿಕೊಂಡಿದ್ದೇವೆ. ಸಮುದಾಯದ ಜನರನ್ನು ಸ್ಥೂಲವಾಗಿ ಅನಕ್ಷರಸ್ಥರೆಂದೇ ಪರಿಗಣಿಸಿ, ಮಕ್ಕಳ ಕಲಿಯುವಿಕೆಗೆ ಅವರಿಂದ ಯಾವುದೇ ಕೊಡುಗೆ ಸಿಗಲಾರದೆಂದೇ ಭಾವಿಸಲಾಗುತ್ತದೆ. ಹಾಗಾಗಿ ಶಾಲೆಗಳ ನಿರ್ಣಯವನ್ನು ಕೈಗೊಳ್ಳುವ –ಕ್ರಿಯೆಗಳಿಂದ ಸಮುದಾಯವನ್ನು ದೂರವೇ ಇಡಲಾಗುತ್ತದೆ. ಸಮುದಾಯ ಶಾಲೆಯೊಡನೆ ತೊಡಗಿಸಿಕೊಳ್ಳುವ ವ್ಯಾಪ್ತಿಯನ್ನು ಶಾಲಾನಿರ್ವಹಣಾ ಸಮಿತಿ (ಎಸ್‌ಎಂಸಿ) ಹಾಗೂ ಗ್ರಾಮ /ಪಂಚಾಯತಿ ಶಿಕ್ಷಣ ಸಮಿತಿಗಳಂತಹ ಆಜ್ಞಾಪಿತ ವಲಯಗಳನ್ನು ಮೀರಿ ಹೆಚ್ಚಿಸುವ ನಿಟ್ಟಿನಲ್ಲಿ ನಮ್ಮ ಪ್ರಯತ್ನ ನಡೆದಿದೆ. ಇದರ ಮೂಲಕ ಸಮುದಾಯವು ಸಹ ಮಕ್ಕಳಿಗೆ ಶಾಲೆಗೆ ಹೊರತಾದ ಬೆಂಬಲವನ್ನು ನೀಡುವ ಜವಾಬ್ದಾರಿಯನ್ನು ವಹಿಸಿಕೊಳ್ಳಲು, ಪೋಷಕರನ್ನು ಕಾರ್ಯಾಚರಣೆಗೆ ಸಿದ್ಧಗೊಳಿಸಲು ಹಾಗೂ ಗ್ರಾಮದಲ್ಲಿ ಬೆಂಬಲಪೂರಿತ ಅಕ್ಷರ-ಸಮೃದ್ಧ ವಾತಾವರಣವನ್ನು ಕಲ್ಪಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಸಾಧ್ಯವಾಗುತ್ತದೆ. ಇಲ್ಲಿರುವ ಪ್ರಮುಖ ಸವಾಲೆಂದರೆ ಶಾಲೆಗಳ ಮೇಲೆ ಇರಬೇಕಾದ ಸಾಮುದಾಯಿಕ ಸ್ವಾಮ್ಯ ಹಾಗೂ ಶಾಲೆಗಳೊಡನೆ ಪೋಷಕರ ತೊಡಗಿಸಿಕೊಳ್ಳುವಿಕೆ. ಇದು ಸದ್ಯದ ಸವಾಲಾಗಿರುವ ವಿಶ್ವಾಸದ ಕೊರತೆಯನ್ನು ತುಂಬಿ ಶಿಕ್ಷಕರಿಗೆ ಧ್ಯೇಯ ಸಾಧನೆಯ ಪ್ರೇರಣೆಯನ್ನು ದೊರಕಿಸಿಕೊಡುತ್ತದೆ. ಹಾಗಾಗಿ ಈ ಪ್ರಯತ್ನವು ಸಾಮುದಾಯಿಕ ವ್ಯವಸ್ಥೆ, ಪಂಚಾಯತ್ಗಳು ಹಾಗೂ ಅದರ ಮುಖ್ಯಸ್ಥರೊಡನೆ ಕೆಲಸ ಮಾಡಿ ಸ್ಥಳೀಯ ಶಾಲಾವ್ಯವಸ್ಥೆಯ ಜವಾಬ್ದಾರಿಯನ್ನು ವಹಿಸಿಕೊಂಡು ಅದನ್ನು ಬಲಪಡಿಸುವ ನಿಟ್ಟಿನಲ್ಲಿ ಕೇಂದ್ರೀಕೃತವಾಗಿದೆ. ಇದರ ಜೊತೆಗೆ ಸಮುದಾಯಕ್ಕೆ ಸೇರಿದ ಸಾಮಾಜಿಕ ಸ್ಫೂರ್ತಿಯುಳ್ಳ ಹೆಂಗಸರ ಒಂದು ಪಡೆಯನ್ನು ಸಾರ್ವಜನಿಕ ವ್ಯವಸ್ಥೆಯ ಸಂಪರ್ಕ ತಾಣ ವೇದಿಕೆಗಳಾದ ಎಸ್.ಎಂ.ಸಿ.ಪಿ.ಆರ್.ಐ. ವೇದಿಕೆಗಳನ್ನು ಪ್ರೋತ್ಸಾಹಿಸಿ ಬೆಂಬಲಿಸಲು ತಯಾರು ಮಾಡಲಾಗುತ್ತಿದೆ..

ಶಾಲಾ ಶಿಕ್ಷಕರೊಡನೆಯ ಸಮಾನಾಂತರ ಒಡನಾಟವು ಅವರ ಸಾಮರ್ಥ್ಯವನ್ನು ಬೆಂಬಲಿಸಲು ಹಾಗೂ ಅವರ ಕರ್ತವ್ಯವನ್ನು

ನಿರ್ವಹಿಸುವ ನಿಟ್ಟಿನಲ್ಲಿ ಸಹಾಯವನ್ನು ಪಡೆಯಲು ಸಾಧ್ಯವಾಗುವಂತೆ ಸಮುದಾಯ ಹಾಗೂ ಪಿ.ಆರ್.ಐ. ನಾಯಕತ್ವದೊಡನೆ ಸಂಪರ್ಕ ಈ ಎರಡನ್ನೂ ಸಾಧಿಸಲು ಪ್ರಯತ್ನಿಸುತ್ತದೆ. ಆದ್ದರಿಂದ ಬದಲಾವಣೆಯ ಸಿದ್ಧಾಂತವು

(ಅ) ಸಾಮುದಾಯಿಕ ಕ್ರಿಯೆಯನ್ನು 'ಹುರಿದುಂಬಿಸುವುದು'

(ಆ) ಪೋಷಕರ ಉತ್ತಮ ತೊಡಗಿಸಿಕೊಳ್ಳುವಿಕೆ

(ಇ) ಶೈಕ್ಷಣಿಕ ವ್ಯವಸ್ಥೆಯ ಕಾರ್ಯಾಚರಣೆಯ ಸಾಮರ್ಥ್ಯವನ್ನು ಬಲಪಡಿಸುವುದು

ಇವುಗಳನ್ನು ಕೇಂದ್ರೀಕರಿಸುತ್ತದೆ. ಫಲಿತಾಂಶ ಮತ್ತು ಸಾಮುದಾಯಿಕ ನಾಯಕತ್ವ ಸೃಷ್ಟಿಯೇ ನಮ್ಮ ಕಾರ್ಯದ ಉದ್ದೇಶವಾಗಿದೆ. ನಿರ್ದಿಷ್ಟವಾಗಿ, ಶಾಲೆ ಮತ್ತು ಹಳ್ಳಿಗಳಲ್ಲಿ ಪ್ರಯತ್ನಗಳು ನಮ್ಮ ನಿರ್ಗಮನದ ನಂತರವೂ ಮುಂದುವರಿಯಬೇಕು ಎಂಬುದು ನಮ್ಮ ಆಶಯವಾಗಿದೆ. ಕಲಿಕೆಯನ್ನು ಪ್ರೋತ್ಸಾಹಿಸುವಂತಹ ವಾತಾವರಣವನ್ನು ನಿರ್ಮಿಸುವ ಪ್ರಕ್ರಿಯೆಯನ್ನು ಸಾಂಸ್ಥೀಕರಿಸಲು ನಮಗೆ ಸಮುದಾಯದ ಪರಿಣಾಮಕಾರೀ ಹಾಗೂ ಭಾವಪೂರ್ಣ ತೊಡಗಿಸಿಕೊಳ್ಳುವಿಕೆಯ ಅಗತ್ಯವಿದೆ.

ಈ ಪ್ರಯತ್ನಗಳಿಗೆ ಸಾಮುದಾಯಿಕ ಸ್ವಯಂಸೇವಕರುಗಳ ತೊಡಗಿಸುವಿಕೆಯಂಥ ಕಾರ್ಯೋಪಯೋಗಿ ವಿಧಾನಗಳಿಂದ ಆಧರಿತವಾದ ಸಮುದಾಯದೊಡನೆ ಒಂದು ಹೊಸ ರೀತಿಯ ತೊಡಗಿಸಿಕೊಳ್ಳುವಿಕೆಯ ಮತ್ತು ನೂತನ ಗುಣವಿಶೇಷಗಳ ಪಾಲನೆಯ ಅಗತ್ಯವಿದೆ. ಇದು ಶಿಕ್ಷಣದ ಬಗ್ಗೆ ಅವರಿಗಿರುವ ದೃಷ್ಟಿಕೋನವನ್ನು ಬೆಳೆಸುವುದರಿಂದ, ಮಗುವಿನ ಜೀವನ ವಿಧಾನವನ್ನು ರೂಪಿಸುವಲ್ಲಿ ಹಾಗೂ ಸಾರ್ವಜನಿಕ ಶೈಕ್ಷಣಿಕ ವ್ಯವಸ್ಥೆಯ ಜವಾಬ್ದಾರಿಗಳ ಹಿಂದೆ ಇರುವ ಶಾಲೆಯ ಮತ್ತು ಮಕ್ಕಳ ಪಾತ್ರವನ್ನು ಪ್ರಶಂಸಿಸುವುದರಿಂದ ಶುರುವಾಗುತ್ತದೆ. ಒಕ್ಕೂಟಗಳು, ಹಾಗು ಇತರ ಸಮಷ್ಟಿ ವ್ಯವಸ್ಥೆಗಳಂತಹ ಸಮುದಾಯ ಆಧಾರಿತ ರಚನೆಗಳು ಇಂಥ ತೊಡಗಿಸಿಕೊಳ್ಳುವಿಕೆಗೆ ಪ್ರಮುಖವಾಗುತ್ತದೆ. ಕಲಿಕೆಯನ್ನು ಪ್ರೋತ್ಸಾಹಿಸುವ ಮತ್ತು ಶಾಲೆಯೊಡನೆ ಸಮುದಾಯದ ತೊಡಗುವಿಕೆಯನ್ನು ಪ್ರಾರಂಭಿಸುವ ವಾತಾವರಣವನ್ನು ರೂಪಿಸುವ ನಿಟ್ಟಿನಲ್ಲಿ ಸಮುದಾಯದಲ್ಲಿನ ಕಾರ್ಯಕ್ರಮಗಳು ಮತ್ತು ಪ್ರಕ್ರಿಯೆಗಳು ಮಹಿಳೆಯರಿಂದ ಸುರಳಿತಗೊಳ್ಳುತ್ತವೆ. ತೊಡಗಿಸಿಕೊಳ್ಳುವಿಕೆಯ ಈ ಪ್ರಕ್ರಿಯೆಯನ್ನು ಸಾಂಸ್ಥಿಕರಿಸಲು, ಸದ್ಯ ಅಸ್ತಿತ್ವದಲ್ಲಿರುವ ಕ್ರಿಯಾಶೀಲ ರಚನೆಗಳಾದ ಶಾಲೆಯ ನಿರ್ವಹಣಾ ಸಮಿತಿ ಹಾಗೂ ಗ್ರಾಮಪಂಚಾಯತ್ನ ಸ್ಥಾಯಿಸಮಿತಿಗಳೊಡನೆ ಕೆಲಸ ಮಾಡುವುದರ ಮೂಲಕ ಅವರ ಸಾಮರ್ಥ್ಯಗಳನ್ನು ಬಲಪಡಿಸಲಾಗುತ್ತದೆ. ಇದು ಈ ರಚನೆಗಳಿಗೆ ಒಂದು ವಿಶಾಲ ಅಡಿಪಾಯವನ್ನು ಕೊಡುವುದರ ಮೂಲಕ ಅವುಗಳ ಪಾರದರ್ಶಕತೆಯನ್ನೂ ಸಮುದಾಯದೆಡೆಗೆ ಇರುವ ಹೊಣೆಗಾರಿಕೆಯನ್ನು ಹೆಚ್ಚಿಸುತ್ತದೆ ಹಾಗೂ ಶಾಲೆಯ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಸಮುದಾಯವು ತೊಡಗಿಸಿಕೊಳ್ಳಲು ಅನುವುಮಾಡಿಕೊಡುತ್ತದೆ.

ಇದರ ನಂತರ ಶೈಕ್ಷಣಿಕ ಅಭಿವೃದ್ಧಿಯ ಉಪಕ್ರಮಗಳ ನಿಟ್ಟಿನಲ್ಲಿ ಕೆಲಸ ಮಾಡಲು ಸಮುದಾಯ-ಆಧಾರಿತ ರಚನೆಗಳ ಸಾಮರ್ಥ್ಯವನ್ನು ಬೆಳೆಸುವಂತಹ ಮಧ್ಯಸ್ತಿಕೆಗಳ ಪ್ರವೇಶವಾಗುತ್ತದೆ. ಮಕ್ಕಳು, ಪೋಷಕರು ಹಾಗೂ ಸಮುದಾಯ ಸ್ವಯಂಸೇವಕರುಗಳಿಂದ ವಿನ್ಯಾಸಗೊಳಿಸಲಾದ ಚಟುವಟಿಕೆಗಳಿಗೆ ಸ್ಥಳೀಯ ಸಮುದಾಯ ಸಂಸ್ಥೆಯು ಆಸರೆಯಾಗಿ, ಮಾಹಿತಿಯ ಹರಿವು ಸೂತ್ರಗೊಂಡು ವಿವಿಧ ಘಟಕಗಳಿಗೆ ಸರಿಯಾದ ಸಮಯಕ್ಕೆ ಪ್ರಗತಿಯ ನೋಟಗಳ ದೃಶ್ಯ ಲಭ್ಯವಾಗುತ್ತದೆ.

## ಪ್ರಗತಿ

ಮಧ್ಯಪ್ರದೇಶ, ಜಾರ್ಖಂಡ್ ಮತ್ತು ಪಶ್ಚಿಮಬಂಗಾಳದ 11 ಘಟಕಗಳಲ್ಲಿ ಟಿ.ಆರ್.ಇ.ನ ಪ್ರಾಥಮಿಕ ಶೈಕ್ಷಣಿಕ ಪ್ರಾಯೋಗಿಕ ಯೋಜನೆಗಳು 2017ರಲ್ಲಿ ಪ್ರಾರಂಭವಾದವು. ಪ್ರತಿ ಘಟಕದಲ್ಲಿಯೂ, ತೊಡಗಿಸಿಕೊಳ್ಳುವಿಕೆಗೆ ಸಾಮುದಾಯಿಕ ಸಮಷ್ಟಿ ವ್ಯವಸ್ಥೆಗಳೊಡನೆ ನಿಕಟವಾಗಿ ಕಾರ್ಯನಿರ್ವಹಿಸುವ ಶೈಕ್ಷಣಿಕ ಸಂಪನ್ಮೂಲ ಸಂಸ್ಥೆಯು[2] ಇಂಬುಕೊಡುತ್ತದೆ. ಮಧ್ಯಪ್ರದೇಶದಲ್ಲಿ ಟಿ .ಆರ್.ಐ.ಎಫ್., ರಾಜ್ಯ ಸರ್ಕಾರದೊಂದಿಗೆ ಶಿಕ್ಷಕರು ಮತ್ತು ಸಿ.ಆರ್ .ಸಿ.ಗಳೊಡನೆ ಕಾರ್ಯನಿರ್ವಹಿಸುವ ಮತ್ತು ಈ ಪ್ರಯತ್ನಕ್ಕೆ ಅನುಕೂಲವಾಗುವಂಥ ವಾತಾವರಣವನ್ನು ನಿರ್ಮಿಸುವ ಔಪಚಾರಿಕ ಒಡಂಬಡಿಕೆಗೆ ಒಳಪಟ್ಟಿದೆ. ಈ ಎಲ್ಲಾ ಸಂಪನ್ಮೂಲ ಸಂಸ್ಥೆಗಳೂ ಟಿ.ಆರ್.ಐ.ನ ಶೈಕ್ಷಣಿಕ ವಿಭಾಗ ಮಂಡಳಿಯ ಭಾಗವಾಗಿದ್ದು ಈ ಮಂಡಳಿಯು ವಿಶಾಲ ಕಾರ್ಯನೀತಿಯನ್ನು ಸಮನ್ವಯಗೊಳಿಸಿ ಸಾಧಿಸಲಾಗುತ್ತಿರುವ ಪ್ರಗತಿಯನ್ನು ಕಾಲಾನುಕ್ರಮವಾಗಿ ಅಳೆದು ನೋಡುತ್ತದೆ.

ಇದು ಪರಸ್ಪರ ಕಲಿಕೆಯ, ಸಹಪಾಠಿಗಳಿಗೂ ಸಹಕಾರದ ಹಾಗೂ ಜಂಟಿ – ಕಾರ್ಯಾಚರಣೆಗಳನ್ನು ರೂಪಿಸುವ ವಲಯವಾಗಿ ವಿಕಾಸಗೊಂಡಿದೆ. ಸಂಪನ್ಮೂಲ ಸಂಸ್ಥೆಗಳು 5 ಮಾರ್ಗಗಳಾದ್ಯಂತ ಮಾರ್ಗಸೂಚಿಯನ್ನು ಅಭಿವೃದ್ಧಿಪಡಿಸಿದ್ದು, ಪ್ರತೀಘಟಕದಲ್ಲಿಯೂ ಸಂದರ್ಭಯೋಚಿತ ಕಾರ್ಯನೀತಿಗಳನ್ನು ಮತ್ತು ಚಟುವಟಿಕೆಗಳನ್ನು ಪರಿಚಯಿಸುತ್ತ ಮಾದರಿ ಶಾಲೆಗಳ ಸರಣಿಯನ್ನು ಪೂರ್ಣಗೊಳಿಸಿದೆ. ಇಂದು 566 ಹಳ್ಳಿಗಳಾದ್ಯಂತ, 731 ಸಮುದಾಯ ಸ್ವಯಂಸೇವಕರು ತಮ್ಮ ಹಳ್ಳಿಗಳ ಶಾಲೆಗಳು ಮತ್ತು ಶಾಲೇತರ ಪ್ರಕ್ರಿಯೆಗಳನ್ನು ಬಲಪಡಿಸುವಲ್ಲಿ ತೊಡಗಿಸಿಕೊಂಡಿದ್ದಾರೆ. ಸ್ತ್ರೀ ಸ್ವ-ಸಹಾಯ ಗುಂಪುಗಳ ಮುಖ್ಯಸ್ಥರನ್ನೊಳಗೊಂಡ 192 ಗ್ರಾಮ ಸಂಸ್ಥೆಗಳು ತಮ್ಮ ಗ್ರಾಮದ ಶಾಲೆಗಳಿಗೆ ಗುರಿಗಳನ್ನು ನಿಗದಿಪಡಿಸಿದ್ದಾರೆ. 56 ಹಳ್ಳಿಗಳಲ್ಲಿ ಗ್ರಂಥಾಲಯ ಮತ್ತು ಕಲಿಕಾ ಕೇಂದ್ರಗಳಂತಹ ಸಹಯೋಗಶೀಲ ಸಮಾನಾಂತರ ಕಲಿಕಾ ಕೇಂದ್ರಗಳು ಪ್ರಾರಂಭವಾಗಿದ್ದು, 110 ಹಳ್ಳಿಗಳಲ್ಲಿ ಗ್ರಾಮ ಸಂಸ್ಥೆಗಳು ಶಿಕ್ಷಕರಿಗೆ ಸಹಕರಿಸಲು ಬಾಲಮೇಳಗಳನ್ನು ಆಯೋಜಿಸುತ್ತಿವೆ. ಸಮುದಾಯದ ಸದಸ್ಯರ ಇಂಥ ಕ್ರಿಯಾಶೀಲ ಭಾಗವಹಿಸುವಿಕೆಯಿಂದ 262 ಶಾಲೆಗಳಲ್ಲಿ ಎಸ್ಎಂಸಿಯ ತೊಡಗಿಸಿಕೊಳ್ಳುವಿಕೆಗಳು ಕ್ರಮಬದ್ಧಗೊಂಡಿವೆ ಹಾಗೂ 176 ಹಳ್ಳಿಗಳಲ್ಲಿ ಎಸ್ಎಂಸಿಗಳು ಗ್ರಾಮಸಭೆ /ಪಂಚಾಯತ್ ನೊಡನೆ ಸಂಪರ್ಕದಲ್ಲಿದ್ದು ಅಲ್ಲಿ ಕ್ರಮವಾಗಿ ಶೈಕ್ಷಣಿಕ ವಿಷಯಗಳ ಬಗ್ಗೆ ಸಂಬಂಧಪಟ್ಟ ಕುಂದುಕೊರತೆಗಳನ್ನು ಗಮನಕ್ಕೆ ತರಲಾಗುತ್ತದೆ. 319 ಶಿಕ್ಷಕರೊಂದಿಗೆ ಟಿಎಲ್ಎಂ ಹಾಗೂ ಪರ್ಯಾಯ ತರಗತಿ ಪ್ರಕ್ರಿಯೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಶಿಕ್ಷಕ ತರಬೇತಿ ಮತ್ತು ವಿಭಿನ್ನ ಸಾಮರ್ಥ್ಯ ನಿರ್ಮಾಣ ಪ್ರಯತ್ನಗಳನ್ನು ನಡೆಸಲಾಗಿದೆ. ಮೇ 2018 ರಲ್ಲಿ ನಿಯೋಜಿತಗೊಂಡ ಮೊದಲ ವಾರ್ಷಿಕ

[2]*Eklavya (http://www.eklavya.in/); Vikramshila (http://www.vikramshila.org/); Prajayatna (www.prajayatna.org); Vidya Bhawan (http://www.vidyabhawan.org/) and Samavesh http://www.samavesh.org/)*

ಅಧ್ಯಯನವು ಮಕ್ಕಳು, ಪೋಷಕರು, ಸಮುದಾಯ, ಶಿಕ್ಷಕರು, ಶಾಲೆ ಈ ಎಲ್ಲ ಘಟಕಗಳೊಡನೆ ಕೆಲಸ ಮಾಡುವ, ಸಮುದಾಯದಿಂದ ನಡೆಸಲಾಗುವ ಬಹು-ಆಯಾಮಗಳುಳ್ಳ ಪ್ರಯತ್ನಗಳ ಒಂದು ಶೈಕ್ಷಣಿಕ ಪ್ರಯತ್ನವು ಉತ್ತಮವಾದ ಕಲಿಕೆಯ ಫಲಿತಾಂಶಗಳನ್ನು ಕೊಡುತ್ತದೆಯೇ ಇಲ್ಲವೇ ಎಂಬುದನ್ನು ತೋರಿಸಬೇಕಿದೆ.

ಆದರೂ, ಒಂದು ಕ್ಷೇತ್ರದಲ್ಲಿ ಈ ಪ್ರಯತ್ನವು ಸ್ಪಷ್ಟವಾಗಿ ಪ್ರಗತಿಯನ್ನು ಹೊಂದುತ್ತಿದೆ, ಅದ್ಯಾವುದೆಂದರೆ ಶಾಲೆಯ ವ್ಯವಹಾರಗಳಲ್ಲಿ ಸಮುದಾಯದ ಸದಸ್ಯರ ಪಾಲ್ಗೊಳ್ಳುವಿಕೆ. ಮಹಿಳಾ ನಾಯಕಿಯೊಬ್ಬರು ಬದಲಾವಣೆಯ ನೈಜ ಅಪೇಕ್ಷೆಯನ್ನು ಹೀಗೆ ಹಿಡಿದಿಟ್ಟರು: 'ನಮಗೆ ನಮ್ಮ ಬದುಕಿನ ಬಗ್ಗೆ ಕೆಟ್ಟದೆನಿಸುತ್ತದೆ, ಅಯ್ಯೋ ನಮಗೆ ಓದುವ ಅವಕಾಶ ಇದ್ದಿದ್ದರೆ... ನಮ್ಮನ್ನು 'ಹಳ್ಳಿ ಗುಗ್ಗು' ಎಂದು ಯಾರೂ ಕರೆಯುತ್ತಿರಲಿಲ್ಲ, ನಮ್ಮ ಮಕ್ಕಳೂ ಇದನ್ನೇ ಎದುರಿಸುವುದು ನಮಗೆಬೇಕಿಲ್ಲ!' ರಾಜಪುರ ಘಟಕದ ಡೇವ್ಲಾ ಹಳ್ಳಿಯ ನಾಯಕಿಯಾದ ರಂಜಿತಾದೇವಿ ಅವರು ಸಮುದಾಯಕ್ಕೆ ಅಗತ್ಯವಿರುವ ಶಿಕ್ಷಣದ ಪ್ರಾಮುಖ್ಯತೆಯ ಬಗ್ಗೆ ಸ್ಪಂದಿಸುತ್ತ ಇದನ್ನು ಹಂಚಿಕೊಂಡರು'... ಮಕ್ಕಳಿಗೆ ಜ್ಞಾನ ಮತ್ತು ತಿಳುವಳಿಕೆಯಿದ್ದರೆ ಅವರು ಬದುಕನ್ನು ಸ್ವಚ್ಛವಾಗಿ ಜೀವಿಸುತ್ತಾರೆ, ಅವರು ಮತ್ತೊಬ್ಬರೊಡನೆ ಮಾತನಾಡಲಿಕ್ಕೆ ಸಾಧ್ಯವಾಗುತ್ತದೆ. ಬೇರೆಯವರು ಮಾತನಾಡಿದ್ದು ಅವರಿಗೆ ಅರ್ಥವಾಗುತ್ತದೆ. ಅವರಿಗೆ ಹಳ್ಳಿಯ ಗಡಿಯಾಚೆಗಿನ ಸಂಗತಿಗಳ ಬಗ್ಗೆಯೂ ಅರಿವಿರುತ್ತದೆ, ಹಾಗೂ ಅವು ಅರ್ಥವಾಗುತ್ತವೆ... ಅವರಿಗೆ ಸರ್ಕಾರದಿಂದ ಸಿಗುವ ಯೋಜನೆ ಹಾಗೂ ಬೆಂಬಲಗಳ ಬಗ್ಗೆ ಅರಿವಿದ್ದು ಈ ಯೋಜನೆಗಳ ಉಪಯೋಗವನ್ನು ಹೇಗೆ ತೆಗೆದುಕೊಳ್ಳಬೇಕು ಎಂಬುದರ ಅರಿವು ಕೂಡ ಇರುತ್ತದೆ.'

ಸುಧಾರಿಸಿದ ಹಾಜರಾತಿಗಳಲ್ಲಿ, ಶಿಕ್ಷಕರು ಮಕ್ಕಳು ಮತ್ತು ಶಾಲೆಯೊಡನೆ ಹೆಚ್ಚು ಸಮಯ ಕಳೆಯುತ್ತಿರುವುದರಲ್ಲಿ, ಮಕ್ಕಳೊಂದಿಗೆ ಪೋಷಕರ ತೊಡಗಿಸಿಕೊಳ್ಳುವಿಕೆಯಲ್ಲಿ, ಶಿಕ್ಷಕರನ್ನು ಗುರುತಿಸುವಲ್ಲಿ ಸಮುದಾಯ ತೋರುತ್ತಿರುವ ಪ್ರಯತ್ನಗಳಲ್ಲಿ, ಎಸ್‌ಎಂಸಿ ಸಭೆಗಳ ಗುಣಮಟ್ಟ ಮುಂತಾದುವುಗಳಲ್ಲಿ ದೂರದ ಗ್ರಾಮೀಣ ಶಾಲೆಗಳಿಗೆ ಭರವಸೆ ಮೂಡಿಸುವ ಕೆಲವು ಸೂಚನೆಗಳು ಕಂಡುಬರುತ್ತಿವೆ. ಸಮುದಾಯಗಳು ಸಂಪನ್ಮೂಲಗಳನ್ನು ಸಿದ್ಧಗೊಳಿಸಿ ಮಕ್ಕಳ ಚಟುವಟಿಕೆ ಕೇಂದ್ರಗಳನ್ನು ಸ್ಥಾಪಿಸಲು ಮುಂದಾಗಿವೆ ಮತ್ತು ಬೇಸಿಗೆ ಶಿಬಿರಗಳನ್ನು ಹಮ್ಮಿಕೊಂಡಿವೆ. ಬಂಕುರಾ ಗ್ರಾಮದಲ್ಲಿ ಉತ್ಸಾಹಿ ಶಿಕ್ಷಕರು ತಮ್ಮ ಅನುಭವಗಳನ್ನು, ಅತ್ಯುತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಲು ಹಾಗೂ ತಮ್ಮ ಬರವಣಿಗೆಯ ಕೌಶಲಗಳನ್ನು ಹರಿತಗೊಳಿಸಲು ಒಂದು ಸ್ಥಳೀಯ ಪತ್ರಿಕೆಯನ್ನು ಹೊರತರಲು ಶುರುಮಾಡಿದ್ದಾರೆ. ಮುಕುಂದ್ ಪುರ್ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಲಕ್ಷ್ಮಣ್ ಮಹತೋ ಅವರ ಅಭಿಪ್ರಾಯದ ಪ್ರಕಾರ ' ಪತ್ರಿಕೆಯು ಪ್ರಗತಿಪರ ಆಲೋಚನೆಗಳ ಧ್ವನಿಯಾಗಿ ಹೊರಹೊಮ್ಮುತ್ತದೆ... ನಿಯತವಾಗಿ ಹೊರಬರುತ್ತಿರುವ ಈ ಪತ್ರಿಕೆಗೆ ಈ ಇಡೀ ಸೀಮೆಯ ಪ್ರಗತಿಯ ಹಾಗೂ ವಿವೇಚನೆಯ ಧ್ವನಿಯಾಗಿ ಹೊರಹೊಮ್ಮಿ ಉತ್ತಮ ಶಿಕ್ಷಣದ ಉದ್ದೇಶವೊಂದಕ್ಕೆ ಸಹಕರಿಸುವ ಕ್ಷಮತೆ ಇದೆ'

ಗ್ರಾಮೀಣ ಭಾರತ ಪರಿವರ್ತನೆಯಲ್ಲಿ, ಈ ಪ್ರಾರಂಭದ ಅನುಭವವು ನಮಗೆ ಗ್ರಾಮೀಣ ಶಾಲೆಗಳನ್ನು ಸುಧಾರಿಸಲು ಒಮ್ಮುಖ ಕ್ರಿಯೆಗಳಿಗೆ ಇರುವ ಸಾಮರ್ಥ್ಯದ ಬಗ್ಗೆ ದೃಢ ವಿಶ್ವಾಸವನ್ನು ನೀಡುತ್ತಿದೆ.

An Initiative of TATA TRUSTS

TRI TRANSFORM RURAL INDIA

● ಅನುವಾದಕರು: **ಸ್ವಯಂಪ್ರಭ ಹೆಗಡೆ** | ಪರಿಶೀಲಕರು: **ಶೈಲಜಾ ಜಿ ಪಿ**

**ಜಾವೇದ್** ಅವರು ಟಿ.ಆರ್.ಐ. ಸಂಸ್ಥೆಯ ಶಿಕ್ಷಣ ವಿಭಾಗ ಮಂಡಳಿಯಲ್ಲಿ ನಿರ್ವಾಹಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಸಹಭಾಗಿತ್ವಗಳ ಸ್ಥಾಪನೆ ಹಾಗೂ ಪೋಷಣೆಯ ಜವಾಬ್ದಾರರಾಗಿದ್ದು ಆಳವಾದ ತಿಳುವಳಿಕೆ ಮತ್ತು ಕೆಳಹಂತದ ಕಾರ್ಯನೀತಿ ಕ್ರಿಯೆಗಳಸಲುವಾಗಿ ಮತ್ತು ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವುದನ್ನು ಬೆಂಬಲಿಸುವ ಕೆಲಸದಲ್ಲಿ ಕೂಡ ನಿರತರಾಗಿದ್ದಾರೆ. ಇವರಿಗೆ ಪ್ರಾಥಮಿಕ ಶಿಕ್ಷಣ ಹಾಗೂ ಅಭಿವೃದ್ಧಿ ವಿಭಾಗದಲ್ಲಿ ಸುಮಾರು 20 ವರ್ಷಗಳ ಅನುಭವವಿದ್ದು, ಅದರಲ್ಲಿ ಹನ್ನೊಂದು ವರ್ಷಗಳ ಕಾಲ ಅವರು ಸರ್ಕಾರೇತರ ಸ್ವಯಂಸೇವಾ ಸಂಸ್ಥೆಗಳು ಮತ್ತು ಭಾರತದ ಹಲವಾರು ರಾಜ್ಯ ಶಿಕ್ಷಣ ಸಂಘಗಳಿಗೆ ಸಂಶೋಧನಾ ಸಹೋದ್ಯೋಗಿಯಾಗಿ ಕೆಲಸ ಮಾಡಿ ಹಲವು ಕಾರ್ಯಕ್ರಮಗಳು ಮತ್ತು ಯೋಜನಾ ಅವಯವಗಳನ್ನು ನಿರ್ವಹಿಸಿದ್ದಾರೆ. ಟಿ ಆರ್ ಐ ಸಂಸ್ಥೆಯನ್ನು ಸೇರುವುದಕ್ಕೂ ಮೊದಲು, ಜಾವೇದ್ ಅವರು ಮುಂಚೂಣಿಯಲ್ಲಿರುವ ಸಂಸ್ಥೆಗಳಾದ ಏಕಲವ್ಯ, ಅಜೀಂ ಪ್ರೇಮ್‌ಜಿ ಸಂಸ್ಥೆ ಇತ್ಯಾದಿಗಳಲ್ಲಿ ವಿಜ್ಞಾನ ಶಿಕ್ಷಣದ ಮೇಲೆ ಕೆಲಸ ಮಾಡಿದ್ದಾರೆ. ಅವರು ಸರ್ಕಾರಿ ಮತ್ತು ಸರ್ಕಾರೇತರ ಅಸ್ತಿತ್ವಗಳಾದ ಎಸ್.ಸಿ.ಇ.ಆರ್.ಟಿ., ಬಿ ಜಿ ವಿ ಎಸ್ ಮಹಾರಾಷ್ಟ್ರ, ದೂಸ್ರಾ ದಸಕ್ ರಾಜಸ್ಥಾನ್ ಇಂಡಿಯಾ, ಆರ್ಚ್ ನಚಿಕೇತ ಟ್ರಸ್ಟ್ ಗಳಲ್ಲಿ ಸಂಶೋಧನಾ ಸಹಕಾರವನ್ನು ಒದಗಿಸಿದ್ದಾರೆ. ಜಾವೇದ್ ಅವರು ಫಿಲಿಪೈನ್ಸ್‌ನ ಏಶಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಿಂದ ಅಭಿವೃದ್ಧಿ ನಿರ್ವಹಣಾ ಕ್ಷೇತ್ರದಲ್ಲಿ ಮಾಸ್ಟರ್ಸ್ ಪದವಿ ಪಡೆದಿದ್ದಾರೆ. ಇವರು ಯುಕೆನ ಯೂನಿವರ್ಸಿಟಿ ಆಫ್ ಸಸೆಕ್ಸ್‌ನಿಂದ ಅಂತಾರಾಷ್ಟ್ರೀಯ ಶಿಕ್ಷಣ ಮತ್ತು ಅಭಿವೃದ್ಧಿ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನೂ, ಸಸ್ಯಶಾಸ್ತ್ರದಲ್ಲಿ ಮಾಸ್ಟರ್ಸ್ ಪದವನ್ನೂ ಸಹ ಪಡೆದಿರುತ್ತಾರೆ. ಅವರನ್ನು javed@trif.inನಲ್ಲಿ ಸಂಪರ್ಕಿಸಬಹುದು.